ವಾಟೆಹೊಳೆ ಅಣೆಕಟ್ಟು ಪ್ರದೇಶದ ಹಿನ್ನೀರಿನಲ್ಲಿ ಮುಳುಗಡೆ ಆಗಿರುವ ಪ್ರದೇಶ

194 - ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು): ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಾಟೆಹೊಳೆ ಅಣೆಕಟ್ಟು ನಿರ್ಮಾಣದ ಕಾಲದಲ್ಲಿ ಸರ್ವೆ ಸರಿಯಾಗಿ ಮಾಡದಿರುವುದರಿಂದ ಸದರಿ ಅಣೆಕಟ್ಟು 2 ವರ್ಷಗಳಿಂದ ತುಂಬಿದಾಗ ಹಿನ್ನೀರಿನಲ್ಲಿ ಮುಳುಗಡೆಯಾಗಿರುವ ಭೂಮಿ ಎಷ್ಟು?

ಆ) ಹಿನ್ನೀರು ಹೆಚ್ಚು ಪ್ರದೇಶ ಆವರಿಸಿ ರಸ್ತೆ ಮತ್ತು ಸೇತುವೆ ಮೇಲೆ 12 ಅಡಿ ನೀರು ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ನೀರಾವರಿ ಇಲಾಖೆಯು ಅಣೆಕಟ್ಟು ತುಂಬಿ ನಿಂತು ತಿಂಗಳಾನುಗಟ್ಟಲೆ ಮೋಟಾರು ದೋಣಿ ಒದಗಿಸದೆ 3 ಜನರು ನೀರಿನಲ್ಲಿ ಮುಳುಗಿ ಸತ್ತಿದ್ದು, ಅವರ ಕುಟುಂಬದವರಿಗೆ ಪರಿಹಾರ ಕೊಡಲಾಗಿದೆಯೇ;

ಈ) ಮೋಟಾರು ದೋಣಿ ಸಕಾಲಕ್ಕೆ ಒದಗಿಸದೆ ಜನರ ಪ್ರಾಣ ರಕ್ಷಣೆ ಮಾಡದ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆಯೇ;

ಉ) ಅಣೆಕಟ್ಟು ತುಂಬಿದಾಗ ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಲು ಅಣೆಕಟ್ಟು ಕೆಳಗೆ ನದಿಗೆ ಸೇತುವೆ ಕಟ್ಟಿ ರಸ್ತೆ ಮಾಡಿ ಕೊಡುವುದು ಅಗತ್ಯವಲ್ಲವೆ;

ಊ) ವಾಟೆಹೊಳೆ ಅಣೆಕಟ್ಟು ಹಿನ್ನೀರು ನಿಲ್ಲುತ್ತದೆಂಬ ಕಾರಣದಿಂದ ಬೈಪಾಸ್ ರಸ್ತೆಗೆ ಇದುವರೆಗೆ ರಸ್ತೆ ದುರಸ್ತಿ ಮಾಡದಿರಲು ಕಾರಣವೇನು;

ಋ) ವಾಟೆಹೊಳೆ ಮುಳುಗಡೆ ಪ್ರದೇಶದ ಎಷ್ಟು ರೈತರಿಗೆ ಪರಿಹಾರ ಧನ ಮತ್ತು ಭೂಮಿ ಕೊಡಬೇಕಾಗಿದೆ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):

ಅ) ಹೆಚ್ಚುವರಿಯಾಗಿ ಭೂಮಿಯು ಮುಳುಗಡೆಯಾಗಿರುವುದಿಲ್ಲ.

ಆ) ಸೇತುವೆಯ ಮೇಲೆ ಸುಮಾರು 8 ಅಡಿ ನೀರು ನಿಂತಿದ್ದ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆ.

ಇ) ದಿನಾಂಕ 22-7-92ರಂದೇ ಹಿನ್ನೀರನ್ನು ತೆಪ್ಪದ ಮುಖಾಂತರ ದಾಟಕೂಡದೆಂದು ಪ್ರಕಟಣೆಯನ್ನು ಹೊರಡಿಸಿದ್ದಾಗ್ಯೂ ಸಹ ಅನಧಿಕೃತವಾಗಿ ನಾಡತೆಪ್ಪದಲ್ಲಿ ಪ್ರಯಾಣಿಸುತ್ತಿದ್ದವರಲ್ಲಿ 3 ಜನ ಸತ್ತಿದ್ದು ಅವರ ಕುಟುಂಬಕ್ಕೆ ತಾಲ್ಲೂಕ್ ತಹಶೀಲ್ದಾರ್ರವರು ಪರಿಹಾರವನ್ನು ತಲಾ 3 ಸಾವಿರ ರೂ.ಗಳಂತೆ ಕೊಟ್ಟಿರುತ್ತಾರೆ.

ಈ) ಸುತ್ತಮುತ್ತಲಿನ ಗ್ರಾಮಸ್ಥರ ಅನುಕೂಲಕ್ಕಾಗಿ 3 ರಸ್ತೆಗಳನ್ನು ನಿರ್ಮಿಸಿ ಸಾರ್ವಜನಿಕರ ಸಂಪರ್ಕಕ್ಕೆ ಪರ್ಯಾಯ ವ್ಯವಸ್ಥೆ ಮಾಡಲಾಗಿತ್ತು. ಈ ಕಾರಣದಿಂದ ಮೋಟಾರು ಬೋಟನ್ನು ಒದಗಿಸುವ ಯೋಜನೆ ಮಾಡಿರಲಿಲ್ಲ. 1992-93ನೇ ಸಾಲಿನಲ್ಲಿ ಸಮಯ ಹಾಗೂ ದೂರವನ್ನು ಉಳಿಸುವ ದೃಷ್ಟಿಯಿಂದ ಮೋಟಾರು ಬೋಟಿಗೆ ಗ್ರಾಮಸ್ಥರು ಒತ್ತಾಯಿಸಿರುವುದರಿಂದ 11-8-92 ರಂದು ಅದರ ವ್ಯವಸ್ಥೆಯನ್ನು ಮಾಡಲಾಯಿತು. 3 ಜನರ ಸಾವಿನ ಅಪಘಾತಕ್ಕೆ ಯಾವುದೇ ಅಧಿಕಾರಿಗಳೂ ಕಾರಣವಲ್ಲದೇ ಇರುವುದರಿಂದ ಅವರ ಮೇಲೆ ಕ್ರಮ ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಈ ಹಿಂದೆಯೇ ಹಿನ್ನೀರಿನಿಂದಾವೃತವಾದ ಗ್ರಾಮಸ್ಥರ ಸಂಚಾರಕ್ಕೆಂದೇ 3 ಬೈಪಾಸ್ ರಸ್ತೆಗಳನ್ನು ಹೊಸದಾಗಿ ನಿರ್ಮಿಸಲಾಗಿರುತ್ತೆ. ಆದ್ದರಿಂದ ಆ ರಸ್ತೆಗಳಿಗೆ ಸದ್ಯದಲ್ಲಿ ರಿಪೇರಿ ಮಾಡಿಸುವ ಅವಶ್ಯಕತೆ ಇರುವುದಿಲ್ಲ.

ಖ) ಬೇಲೂರು ತಾಲ್ಲೂಕಿನಲ್ಲಿ ಬರುವ ಈ ಕೆಳಕಂಡ ಗ್ರಾಮದ ರೈತರುಗಳಿಗೆ ಪರಿಹಾರ ಧನ ಬಾಕಿ ಇರುತ್ತದೆ.

		ಎ.ಗುಂ.
1)	ಬೆಳಗುಲಿ	25.39
2)	ಬಿಕ್ಕೋಡು	10.00
3)	ಹೊನ್ನವಳ್ಳಿ	4.00
4)	ಚಟ್ಟನಹಳ್ಳಿ	1.00
5)	ಮದಘಟ್ಟ	1.28
6)	ಹೊನ್ನೇಮನೆ	12.00
7)	ಹೊನ್ನವಳ್ಳಿ	ಗ್ರಾಮಠಾಣೆ
8)	ನಡುವನಹಳ್ಳಿ	2.10

ಒಟ್ಟು 56 ಎಕರೆ 37 ಗುಂಟೆ ಭೂಮಿಗೆ ಪರಿಹಾರ ಕೊಡಬೇಕಾಗಿರುತ್ತದೆ.

ಯಗಚಿ ಮುಳುಗಡೆ ಪ್ರದೇಶದ ಜನರಿಗೆ ಕಾಲೋನಿಗಳನ್ನು ಕಟ್ಟಿಸುವುದು

196-ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಯಗಚಿ ಜಲಾಶಯ ಯೋಜನೆಯಿಂದಾಗಿ ಮುಳುಗಡೆಯಾಗಿರುವ ಭೂಮಿ ಎಷ್ಟು ಹಾಗೂ ಎಷ್ಟು ಎಕರೆ ಪ್ರದೇಶಕ್ಕೆ ಈವರೆಗೆ ಪರಿಹಾರ ಕೊಡಲಾಗಿದೆ;

ಆ) ಯಗಚಿ ಅಣೆಕಟ್ಟು ಮುಳುಗಡೆ ಪ್ರದೇಶದ ಜನರಿಗೆ ಪುನರ್ವಸತಿ ಕಾಲೋನಿಗಳನ್ನು ಕಟ್ಟಿರುವಲ್ಲಿ ಅವರಿಗೆ ಭೂಮಂಜೂರಾತಿ ಮಾಡಲಾಗಿದೆಯೇ;

ಇ) ಯಾವ ಯಾವ ಪುನರ್ವಸತಿ ಕಾಲೋನಿಯ ಹತ್ತಿರ ಎಷ್ಟೆಷ್ಟು ಭೂಮಿ ಮೀಸಲಿಟ್ಟಿದೆ. ಹಾಗೂ ಎಷ್ಟು ಜನರಿಗೆ ಎಷ್ಟು ಎಕರೆ ಭೂಮಿ ಈವರೆಗೆ ಮಂಜೂರ್ಮಾಡಲಾಗಿದೆ;

ಈ) ಯಗಚಿ ಅಣೆಕಟ್ಟು ನಾಲಾ ಹೋಗಿ ಆ ಪ್ರದೇಶದ ಜನರು ಎಷ್ಟು ಎಕರೆ ಭೂಮಿ ಕಳೆದುಕೊಂಡಿರುವರು ಹಾಗೂ ಅವರಿಗೆ ಪರಿಹಾರ ಕೊಡಲಾಗಿದೆಯೆ;

ಉ) ಅವರುಗಳಿಗೆ ಭೂಮಿ ಮಂಜೂರಾತಿ ಕೊಡಲಾಗಿದೆಯೆ ;

ಊ) ಹಾಗಿದ್ದಲ್ಲಿ, ಎಷ್ಟು ಎಕರೆ ಕೊಡಲಾಗಿದೆ.

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):

ಅ) ಯಗಚಿ ಅಣೆಕಟ್ಟು ಪೂರ್ಣಗೊಂಡ ನಂತರ ಜಲಾಶಯದಡಿ 4846 ಎಕರೆಯಷ್ಟು ಪ್ರದೇಶ ಮುಳುಗಡೆಯಾಗುತ್ತದೆ. 1994 ಎ, 33 ಗುಂಟೆ ಪ್ರದೇಶಕ್ಕೆ ರೂ. 308.70 ಲಕ್ಷಗಳ ಪರಿಹಾರ ಧನ ನೀಡಲಾಗಿದೆ.

ಆ) ಯಗಚಿ ಯೋಜನೆ ಅಣೆಕಟ್ಟು ಮುಳುಗಡೆ ಪ್ರದೇಶದ ಜನರಿಗೆ ಪುನರ್ವಸತಿ ಕಾಲೋನಿಗಳನ್ನು ಕಟ್ಟಿರುವಲ್ಲಿ ಅವರಿಗೆ ಭೂಮಂಜೂರಾತಿ ನೀಡುವ ಬಾಬ್ತು 597 ಪ್ರಕರಣಗಳಿಗೆ ಸಂಬಂಧಿಸಿದಂತೆ 2351 ಎಕರೆ ಜಮೀನು ಮಂಜೂರಾತಿ ಮಾಡಲಾಗಿದ್ದು, ಜನವರಿ 1994ರ ಅಂತ್ಯದವರೆಗೆ 525 ಪ್ರಕರಣಗಳಿಗೆ ಸಂಬಂಧಿಸಿದಂತೆ ಎ 2064-19 ಗುಂ. ಪ್ರದೇಶಕ್ಕೆ ಸಾಗುವಳಿ ಚೀಟಿಯನ್ನು ನೀಡಲಾಗಿದೆ.